2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**<u>ಎಸ್.ಸಿ.5048/2024</u>**

ದಿಃ25.04.2025
ಚಾಸಾ-1 ಪ್ರಾಸಾ-3

| | |
|---|---|
| ಹೆಸರು | : ವಿ.ಜಿ. ಮಿಥುನ್ ಶಿಲ್ಪಿ |
| ತಂದೆಯ ಹೆಸರು | : ಲೇಟ್ ವೆಂಕಟಸ್ವಾಮಿ |
| ವಯಸ್ಸು | : 47 ವರ್ಷ |
| ಉದ್ಯೋಗ | : ಪೊಲೀಸ್ ಇನ್ಸ್ ಪೆಕ್ಟರ್, ಸಿಐಡಿ ಕೇಂದ್ರ ಕಛೇರಿ ಬೆಂಗಳೂರು |
| ವಾಸ | : ಬೆಂಗಳೂರು |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

ನಾನು ದಿಃ31.01.2023ರಿಂದ ದಿಃ12.03.2025ರವರೆಗೆ ಕನಕಪುರ ಟೌನ್ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ21.01.2024ರಂದು ನಾನು ಹಾಗೂ ಚಾಸಾ-4 ರಿಂದ 8ರವರು ಬೂದಿಕೆರೆ ರಸ್ತೆಯ ಬಳಿ ರಾತ್ರಿ ಗಸ್ತು ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರಿಂದ ರಾತ್ರಿ 10.00 ಗಂಟೆ ಸಮಯದಲ್ಲಿ ಸುಮಾರು 5 ರಿಂದ 6 ಜನ ಆಸಾಮಿಗಳು ಕನಕಪುರ ಟೌನಿನ ಹೊರ ಭಾಗದಲ್ಲಿನ ಕೆರೆಯ ಪಕ್ಕದಲ್ಲಿರುವ ಹೊಸದಾಗಿ ನಿರ್ಮಾಣಗೊಂಡಿರುವ ಅಯ್ಯಪ್ಪ ದೇವಸ್ಥಾನಕ್ಕೆ ತೆಂಗಿನ ತೋಪಿನ ಮಧ್ಯದಲ್ಲಿ ಹಾದು ಹೋಗುವ ರಸ್ತೆಯ ನಿರ್ಜನ ಪ್ರದೇಶದಲ್ಲಿ ಕೈಗಳಲ್ಲಿ ಮಚ್ಚು, ದೊಣ್ಣೆ ಮತ್ತು ಖಾರದ ಪುಡಿ ಪ್ಯಾಕೇಟ್ ಹಿಡಿದು, ಒಂದು ಆಟೋವನ್ನು ನಿಲ್ಲಿಸಿಕೊಂಡು ಅಲ್ಲಿ ಹಾದು ಹೋಗುವ ಜನರನ್ನು ದರೋಡೆ ಮಾಡಲು ಹೊಂಚು ಹಾಕುತ್ತಿದ್ದಾರೆ ಅಂತ ಮಾಹಿತಿ ಬಂದ ಮೇರೆಗೆ, ನಾನು, ಚಾಸಾ-6ರವರಿಗೆ ಪಂಚರನ್ನು ಸ್ಥಳಕ್ಕೆ ಬರಮಾಡಿಕೊಳ್ಳುವಂತೆ ಸೂಚಿಸಿದಂತೆ ಚಾಸಾ-6ರವರು ಚಾಸಾ-2 ಮತ್ತು 3ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರಿಗೆ ಈ ಪ್ರಕರಣದ ಮಾಹಿತಿ ನೀಡಿ ನಂತರ ಪಂಚರನ್ನಾಗಿ ಸಹಕರಿಸಲು ಕೋರಿಕೊಂಡಿರುತ್ತೇನೆ. ನಂತರ ಚಾಸಾ-2 ಮತ್ತು 3ರವರು ಪಂಚರಾಗಿ ಬರಲು ಒಪ್ಪಿಕೊಂಡ ಮೇರೆಗೆ ನಂತರ ಸದರಿ ಪಂಚರು ಹಾಗೂ ಸಿಬ್ಬಂದಿಗಳನ್ನು ನಮ್ಮ ಸರ್ಕಾರಿ ಜೀಪ್‌ನಲ್ಲಿ ಕರೆದುಕೊಂಡು ರಾತ್ರಿ 10.30 ಗಂಟೆಗೆ ಸ್ಥಳಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ಮರೆಯಲ್ಲಿ ನಿಂತು ನೋಡಲಾಗಿ, ಅಲ್ಲಿ ಸುಮಾರು 06 ಜನ ಆಸಾಮಿಗಳು

ಕೈಯಲ್ಲಿ ಲಾಂಗು ಮತ್ತು ದೊಣ್ಣೆಗಳನ್ನು ಹಿಡಿದುಕೊಂಡು ಒಂದು ನಂಬರ್ ಪ್ಲೇಟ್ ಇಲ್ಲದ ಆಟೋವನ್ನು ನಿಲ್ಲಿಸಿಕೊಂಡಿರುವುದನ್ನು ನೋಡಿ ಗಮನಿಸಿರುತ್ತೇನೆ. ನಂತರ ಅವರುಗಳ ಪೈಕಿ ಒಬ್ಬನು ಲಾಂಗನ್ನು ಹಿಡಿದುಕೊಂಡಿದ್ದು ಇನ್ನುಳಿದ ಮೂರು ಜನರ ಕೈಯಲ್ಲಿ ದೊಣ್ಣೆ, ಮತ್ತೊಬ್ಬನ ಕೈಯಲ್ಲಿ ಖಾರದಪುಡಿ ಪ್ಯಾಕೇಟ್ ಹಾಗೂ ಇನ್ನೊಬ್ಬನ ಕೈಯಲ್ಲಿ ಚಾಕು ಇರುವುದನ್ನು ನೋಡಿ ಗಮನಿಸಿರುತ್ತೇನೆ. ನಂತರ ಸದರಿ 06 ಜನ ಆಸಾಮಿಗಳು ಈ ದಿನ ಈ ರಸ್ತೆಯಲ್ಲಿ ಯಾರೇ ಬಂದರೂ ಅವರ ಬಳಿ ಇರುವ ಚಿನ್ನ, ಹಣ ಹಾಗೂ ಮೊಬೈಲ್ ಗಳನ್ನು ಹೆದರಿಸಿ ಕಿತ್ತುಕೊಳ್ಳೋಣ ಅಂತ ಮಾತನಾಡಿಕೊಳ್ಳುತ್ತಿದ್ದರು. ನಂತರ ನಾವುಗಳು ಆ ವ್ಯಕ್ತಿಗಳು ದರೋಡೆ ಮಾಡುವ ಪ್ರಯತ್ನದಲ್ಲಿರುವುದನ್ನು ಖಚಿತಪಡಿಸಿಕೊಂಡು ಅವರನ್ನು ಹಿಡಿದುಕೊಳ್ಳಲು ಸಿಬ್ಬಂದಿಗಳಿಗೆ ಸೂಚಿಸಿ, ದಾಳಿ ನಡೆಸಿದಾಗ 06 ಜನರ ಪೈಕಿ 04 ಜನರನ್ನು ಹಿಡಿದುಕೊಂಡಿದ್ದು, ಇಬ್ಬರು ತಪ್ಪಿಸಿಕೊಂಡು ಓಡಿ ಹೋಗಿರುತ್ತಾರೆ. ಸಿಕ್ಕ 04 ಜನ ಆಸಾಮಿಗಳನ್ನು ವಿಚಾರ ಮಾಡಿರುತ್ತೇವೆ. ನಾನು 1ನೇ ಆರೋಪಿ ದನುಷ್‌ನನ್ನು ಹಿಡಿದುಕೊಂಡಿದ್ದು, ಆತನ ಬಳಿ ಇದ್ದ ಒಂದು ಕಬ್ಬಿಣದ ಲಾಂಗನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ನಂತರ ಚಾಸಾ-4ರವರು 1ನೇ ಆರೋಪಿ ಚಂದ್ರಶೇಖರ್ ಉಃ ಚೋಟೆಯನ್ನು ಹಿಡಿದುಕೊಂಡಿದ್ದು, ಆತನ ಬಳಿ ಇದ್ದ ಒಂದು ಮರದ ದೊಣ್ಣೆಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಚಾಸಾ-5ರವರು 3ನೇ ಆರೋಪಿ ದಿನೇಶನನ್ನು ಹಿಡಿದುಕೊಂಡಿದ್ದು, ಆತನ ಬಳಿ ಇದ್ದ ಒಂದು ಮರದ ದೊಣ್ಣೆಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಚಾಸಾ-8ರವರು 4ನೇ ಆರೋಪಿಯನ್ನು ಹಿಡಿದುಕೊಂಡಿದ್ದು, ಆತನ ಬಳಿ ಇದ್ದ ಮೆಣಸಿನಪುಡಿ ಪ್ಯಾಕೇಟ್ ವಶಕ್ಕೆ ಪಡೆದುಕೊಂಡಿರುತ್ತಾರೆ. ಓಡಿ ಹೋದ ಇಬ್ಬರ ಆಸಾಮಿಗಳ ಬಗ್ಗೆ ವಿಚಾರ ಮಾಡಿದಾಗ ರಾಹುಲ್ ನಾಯ್ಕ ಮತ್ತು ಸುಹಾಸ್ ಅಂತ ತಿಳಿದುಬಂದಿರುತ್ತದೆ. ಆರೋಪಿ ರಾಹುಲ್ ನಾಯ್ಕ ಹಾಗೂ ಸುಹಾಸ್‌ರವರು ಓಡಿ ಹೋಗುವ ಸಮಯದಲ್ಲಿ ಚಾಕು ಮತ್ತು ದೊಣ್ಣೆಯನ್ನು ಸ್ಥಳದಲ್ಲಿಯೇ ಬಿಸಾಡಿ ಹೋಗಿರುತ್ತಾರೆ. ನಂತರ 04 ಜನರನ್ನು ವಶಕ್ಕೆ ಪಡೆದುಕೊಂಡು ಪಂಚನಾಮೆ ಜರುಗಿಸಿ ಒಂದು ಕಬ್ಬಿಣದ ಲಾಂಗು, ಮೂರು ಮರದ ದೊಣ್ಣೆಗಳು, ಒಂದು ಖಾರದಪುಡಿ ಪ್ಯಾಕೇಟ್, ಒಂದು ಚಾಕು ಹಾಗೂ ನಂಬರ್ ಪ್ಲೇಟ್ ಇಲ್ಲದ ಆಟೋವನ್ನು ಅಮಾನತುಪಡಿಸಿಕೊಂಡು ನಂತರ ವರದಿಯೊಂದಿಗೆ ಠಾಣಾಧಿಕಾರಿಗಳ ಸಮಕ್ಷಮ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಸದರಿ ದಾಳಿ

ಮಹಜರ್ ಮತ್ತು ಅದರಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದಾಳಿ ಮಹಜರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ21.02.2024ರ ವರದಿ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4, 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮೂರು ದೊಣ್ಣೆಗಳು, ಒಂದು ಕಬ್ಬಿಣದ ಲಾಂಗು, ಒಂದು ಚಾಕು, ಒಂದು ಖಾರದಪುಡಿ ಪ್ಯಾಕೇಟ್‌ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂಒ-1 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿಯು ನಂಬರ್ ಪ್ಲೇಟ್ ಇಲ್ಲದ ಆಟೋವನ್ನು ಈಗ ತೋರಿಸಿದ ಫೋಟೋ ಮೂಲಕ ನೋಡಿ ಗುರುತಿಸಿದ್ದು ಸದರಿ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ರಿಂದ 4ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಜಿ.ಎಂ., 2 ಮತ್ತು 4ನೇ ಆರೋಪಿತರ ಪರ ವಕೀಲರಿಂದ</u>**

ಬಾತ್ಮಿದಾರರಿಂದ ನನಗೆ ಖುದ್ದಾಗಿ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿ ಬಂದಾಗ ಸಮಯ ರಾತ್ರಿ 10-00 ಗಂಟೆ ಆಗಿತ್ತು. ಆ ಸಮಯದಲ್ಲಿ ನನ್ನ ಜೊತೆ ಚಾಸಾ-4 ರಿಂದ 8ರವರು ಗಸ್ತು ಕರ್ತವ್ಯದಲ್ಲಿದ್ದರು. ಚಾಸಾ-2 ಮತ್ತು 3ರವರನ್ನು ನಮ್ಮ ಪೊಲೀಸ್ ಸಿಬ್ಬಂದಿಯವರು ಕರೆಸಿರುತ್ತಾರೆ. ನಮ್ಮ ಪೊಲೀಸ್ ಸಿಬ್ಬಂದಿಯವರು ಚಾಸಾ-2 ಮತ್ತು 3ರವರನ್ನು ಹೇಗೆ ಬರಮಾಡಿಕೊಂಡರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಘಟನೆ ನಡೆಯಿತೆಂದು ಹೇಳಲಾದ ಸ್ಥಳವು ಠಾಣೆಯಿಂದ ಸುಮಾರು ಎರಡು ಕಿಲೋ ಮೀಟರ್ ದೂರದಲ್ಲಿರುತ್ತದೆ. ಸುಮಾರು 10 ರಿಂದ 15 ನಿಮಿಷದಲ್ಲಿ ನಾವು ಸ್ಥಳಕ್ಕೆ ಹೋಗಿರುತ್ತೇವೆ. ಘಟನೆ ನಡೆಯಿತೆಂದು ಹೇಳಲಾದ ಸ್ಥಳವು ಹೆದ್ದಾರಿಯಿಂದ ಅರ್ಧ ಕಿಲೋ ಮೀಟರ್ ದೂರದಲ್ಲಿರುತ್ತದೆ. ಘಟನೆ ನಡೆಯಿತೆಂದು ಹೇಳಲಾದ ಸ್ಥಳವು ಮಣ್ಣು ರಸ್ತೆಯಿಂದ ಕೂಡಿರುತ್ತದೆ. ಸುಮಾರು 20 ಅಡಿ ದೂರದಿಂದ ಆರೋಪಿತರ ಚಲನ ವಲನಗಳನ್ನು ನೋಡಿ ಗಮನಿಸಿರುತ್ತೇನೆ. ಘಟನಾ ಸ್ಥಳಕ್ಕೆ ಸರ್ಕಾರಿ ಜೀಪ್‌ನಲ್ಲಿ ಹೋಗುವಾಗ ವಾಹನದ ಹೆಡ್ ಲೈಟ್‌ನ್ನು ಹಾಕಿಕೊಂಡು ಹೋಗಿರುತ್ತೇವೆ. ಘಟನೆ ನಡೆಯಿತೆಂದು ಹೇಳಲಾದ ಸ್ಥಳವು ನಿರ್ಜನ ಪ್ರದೇಶ ಅಲ್ಲ

ಎಂದರೆ ಸರಿಯಲ್ಲ. ಘಟನೆ ನಡೆಯಿತೆಂದು ಹೇಳಲಾದ ರಸ್ತೆಯು ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಅಂತ್ಯಗೊಳ್ಳುತ್ತದೆ. ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ನೂತನವಾಗಿ ನ್ಯಾಯಾಲಯದ ಕಟ್ಟಡವನ್ನು ಕಟ್ಟಲಾಗಿರುತ್ತದೆ ಎಂದರೆ ಸರಿಯಲ್ಲ. ಘಟನೆ ನಡೆಯಿತೆಂದು ಹೇಳಲಾದ ಪ್ರದೇಶದಿಂದ ಸುಮಾರು ಅರ್ಧ ಕಿಲೋ ಮೀಟರ್ ಅಂತರದಲ್ಲಿ ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ ಬರುತ್ತದೆ ಎಂದರೆ ಸರಿ. ಘಟನೆ ನಡೆಯಿತೆಂದು ಹೇಳಲಾದ ಪ್ರದೇಶದ ಸ್ವಲ್ಪ ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ಇದ್ದು, ಸದರಿ ಹೆದ್ದಾರಿಯಲ್ಲಿ ಸುಮಾರು 5-6 ಕಲ್ಯಾಣ ಮಂಟಪಗಳು ಬರುತ್ತವೆ ಎಂದರೆ ಸರಿ. ಘಟನೆ ನಡೆಯಿತೆಂದು ಹೇಳಲಾದ ಪ್ರದೇಶದಲ್ಲಿ ಜನ ಸಂದಣಿ ಇರುತ್ತದೆ ಎಂದರೆ ಸರಿಯಲ್ಲ. ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಹೋಗಲು ಒಂದೇ ದಾರಿ ಇರುತ್ತದೆ. 2 ಮತ್ತು 4ನೇ ಆರೋಪಿತರು ಘಟನೆ ನಡೆಯಿತೆಂದು ಹೇಳಲಾದ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಎಂಒ-1 ರಿಂದ 6ನ್ನು ಈ ಕೇಸಿಗೋಸ್ಕರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ-2 ರಿಂದ 4ರವರನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 4ನ್ನು ಠಾಣೆಯಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಮದುವೆ ಕಾರ್ಯಕ್ಕೆ ಬಂದು, ನೈಸರ್ಗಿಕ ಕಾರ್ಯದಲ್ಲಿ ತೊಡಿಗಿರುವಾಗ ವಿನಃ ಕಾರಣ ವಶಕ್ಕೆ ಪಡೆದುಕೊಂಡು ಸುಳ್ಳ ಪ್ರಕರಣ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಂಕಿ ಸಂಖ್ಯೆಗಾಗಿ ಈ ಕೇಸನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 3ನೇ ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲು 2 ಮತ್ತು 4ನೇ ಆರೋಪಿತರು ಮಾಡಿದ ಪಾಟೀ ಸವಾಲಿನಂತೆ ಇರುತ್ತದೆ ಎಂದು ತಿಳಿಸಿ ಅವರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.